ಇದು ನ್ಯಾಯವಾ? ರೈತರ ಪರವಾಗಿ ರೂ. 4 ಕೊಡಬೇಕೆಂದು ಟಿ.ಬಿ. ಜಯಚಂದ್ರ ರವರು ಬೆಳಿಗ್ಗೆ ಹೇಳಿದರು. 7 ಸಾವಿರ ರೂಪಾಯಿಗೆ 1 ಟನ್ ಇದ್ದಂಥ ಪದಾರ್ಥ ಪಶು ಆಹಾರ ಕಾರ್ಖಾನೆಯಲ್ಲಿ ರೂ.17 ಸಾವಿರ ರೂಪಾಯಿಗೆ ಇವತ್ತು ಮಾರಾಟವಾಗುತ್ತಿದೆ. ಅಂದರೆ ಈ ವರ್ಷ 59 ಕೋಟಿ ನಷ್ಟವಿದೆ. ಸುಮಾರು 83 ಕೋಟಿ ನಷ್ಟವಾಗುತ್ತದೆ. 64 enquiry ಬಗ್ಗೆ ನಾನು ತಲೆ ಕೆಡಿಸಿಕೊಂಡಿಲ್ಲ. ಹೈಕೋರ್ಟ್‌ನಲ್ಲಿ ಇರುವ ವಿಷಯ ಮಾತನಾಡುತ್ತಿಲ್ಲ. ವೆಂಕಟರಾಮ ವಿಷಯ ಮಾತನಾಡುತ್ತಿಲ್ಲ. ಸಮಗ್ರ ತನಿಖೆ ಆಗಬೇಕು.

ಶ್ರೀ ಅಪ್ಪಚ್ಚು ರಂಜನ್ ಎಂ.ಪಿ:– ನಾವು enquiry ಮಾಡುವುದಕ್ಕೆ ತಯಾರಿದ್ದೇವೆ. ಹೈಕೋರ್ಟ್‌ನಲ್ಲಿ stay order ತಂದಿದ್ದಾರೆ. 3 ವರ್ಷ ಅಲ್ಲ, 10 ವರ್ಷವಾದರೂ enquiry ಮಾಡುವುದಕ್ಕೆ ತಯಾರಿದ್ದೇವೆ.

(ಗೊಂದಲ)

ಅಧ್ಯಕ್ಷರು:– ವಿಷಯ ಕೋರ್ಟ್‌ನಲ್ಲಿರುವುದರಿಂದ ಪ್ರಸ್ತಾಪ ಮಾಡುವುದು ಸರಿಯಲ್ಲ.

ಶ್ರೀ ಹೆಚ್.ಡಿ.ರೇವಣ್ಣ:– 59 ಕೋಟಿಗೆ stay order ತಂದಿದ್ದಾರೆ? 59 ಕೋಟಿ ನಷ್ಟಕ್ಕೆ stay order ಇಲ್ಲ.

ಅಧ್ಯಕ್ಷರು:– ಕೋರ್ಟ್‌ನಲ್ಲಿ ವಿಷಯ ಇದೆ ನೋಡೋಣ. ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ:– ಕೋರ್ಟ್‌ನಲ್ಲಿ ವಿಷಯ ಇರುವುದು ಬೇರೆ ಉದ್ದೇಶಕ್ಕೆ ಲೂಟಿ ಹೊಡೆಯುವುದಾರೆ ಹೊಡೆಯುವುದಕ್ಕೆ ಹೇಳಲಿ ಮಂತ್ರಿಗಳು.

5. ವಿಷಯ: ಹೊನ್ನಾವಳ್ಳಿ ಏತ ನೀರಾವರಿ ಯೋಜನೆಯ ಮೂಲಕ ಹೊಸದುರ್ಗ ತಾಲ್ಲೂಕಿನ ಬಲ್ಲಾಳ ಸಮುದ್ರ ಕೆರೆಗೆ ನೀರನ್ನು ಹರಿಸುವ ಬಗ್ಗೆ.

ಅಧ್ಯಕ್ಷರು:– ಶ್ರೀ ಗೂಳಿಹಟ್ಟಿ ಶೇಖರ್, ಉತ್ತರ ಇದೆ. Clarification ಕೇಳಿ.

ಶ್ರೀ ಎಸ್.ಸುರೇಶ್ ಕುಮಾರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಜಲಸಂಪನ್ಮೂಲ ಸಚಿವರ ಪರವಾಗಿ ಮಾನ್ಯ ಅಧ್ಯಕ್ಷರೆ, ಹೊಸದುರ್ಗ ತಾಲ್ಲೂಕಿನ ಬಲ್ಲಾಳಸಮುದ್ರ ಕೆರೆಗೆ ಕುಡಿಯುವ ನೀರನ್ನು ಹರಿಸುವುದು ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ 9.90 ಕಿಮೀ ನಿಂದ ತಿಪಟೂರು ತಾಲ್ಲೂಕಿನ ಹೊನ್ನವಳ್ಳಿ ಕುಡಿಯುವ

ನೀರಿನ ಏತ ಯೋಜನೆಯಲ್ಲಿ ಅಳವಡಿಸಲಾಗಿದೆ. ಯೋಜನೆಯ ವಿವರ ಕೆಳಕಂಡಂತಿದೆ.

ಹೇಮಾವತಿ ಯೋಜನೆ ತುಮಕೂರು ಶಾಖಾ ನಾಲೆ ಕಿಮೀ 9.90 ನಿಂದ ನೀರನ್ನು ಎತ್ತಿ, ತಿಪಟೂರು ತಾಲ್ಲೂಕಿನ ಕಸಬಾ ಮತ್ತು ಹೊನ್ನವಳ್ಳಿ ಹೋಬಳಿಯ 18 ಕೆರೆಗಳಿಗೆ ಅರಸೀಕೆರೆ ತಾಲ್ಲೂಕಿನ ಕಣಕಟ್ಟೆ ಹೋಬಳಿ 3 ಕೆರೆಗಳಿಗೆ ಕಡೂರು ತಾಲ್ಲೂಕಿನ ಸಿಂಗಟಗೆರೆ ಹೋಬಳಿಯ ಒಂದು ಕೆರೆಗೆ ಮತ್ತು ಹೊಸದುರ್ಗ ತಾಲ್ಲೂಕಿನ ಕಸಬಾ ಹೋಬಳಿಯ ಒಂದು ಕೆರೆಗೆ ಒಟ್ಟು 23 ಕೆರೆಗಳಿಗೆ ನೀರನ್ನು ಒದಗಿಸಲು ಯೋಜನೆ ರೂಪಿಸಲಾಗಿದೆ. ಈ ಯೋಜನೆಯಿಂದ ಒಟ್ಟು 86 ಗ್ರಾಮಗಳಿಗೆ ಕುಡಿಯುವ ನೀರು ಒದಗಿಸಲು ಯೋಜಿಸಲಾಗಿದೆ. ಈ ಯೋಜನೆಗೆ ಸರ್ಕಾರವು ದಿನಾಂಕ:12-02-2009 ರಂದು ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಮುಖ್ಯ ಇಂಜಿನಿಯರ್, ಹೇಮಾವತಿ ನಾಲಾ ವಲಯ, ತುಮಕೂರು, ಇವರು ರೂ.87.20 ಕೋಟಿಗಳ ಕಾಮಗಾರಿಗಳಿಗೆ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಯೋಜನೆಯನ್ನು ಟೆಂಡರ್ ಆಧಾರದ ಮೇಲೆ ಗುತ್ತಿಗೆದಾರರಿಗೆ ವಹಿಸಿದ್ದು, ಕಾಮಗಾರಿಯನ್ನು ಮಾರ್ಚ್ 2009ರಲ್ಲಿ ಪ್ರಾರಂಭಿಸಲಾಗಿರುತ್ತದೆ. 11.50 ಕಿ.ಮೀ. ಉದ್ದದ 2 ಸಾಲು ಪೈಪ್ ಲೈನ್‌ಗಳ ಮೂಲಕ ನೀರನ್ನು ಪಂಪ್ ಮಾಡಿ ಅಲ್ಲಿಂದ ಗುರುತ್ವಾಕರ್ಷಣೆ ಮೂಲಕ ತಿಪಟೂರು ತಾಲ್ಲೂಕಿನ ಕೆರೆಗಳಿಗೆ 1 ಸಾಲು ಪೈಪ್ ಲೈನ್ ಮುಖಾಂತರ ಮತ್ತು ಅರಸೀಕೆರೆ, ಕಡೂರು ಹಾಗೂ ಹೊಸದುರ್ಗ ತಾಲ್ಲೂಕಿನ 1 ಸಾಲು ಪೈಪ್ ಲೈನ್ ಮುಖಾಂತರ ನೀರು ಹರಿಸಲು ಯೋಜನೆ ರೂಪಿಸಲಾಗಿದ್ದು, ಈ ಯೋಜನೆಯು ಪೂರ್ಣಗೊಂಡಿದ್ದು ತಿಪಟೂರು ತಾಲ್ಲೂಕಿನ 18 ಕೆರೆಗಳು ಹಾಗೂ ಅರಸೀಕೆರೆ ತಾಲ್ಲೂಕಿನ 2 ಕೆರೆಗಳಿಗೆ ಪ್ರಾಯೋಗಿಕವಾಗಿ ನೀರನ್ನು ಹರಿಸಲಾಗಿದೆ.

ಪ್ರಸ್ತುತ ಬಲ್ಲಾಳ ಸಮುದ್ರ ಕೆರೆಯು ಅರಸೀಕೆರೆ ಪೈಪ್ ಲೈನ್‌ನ ವ್ಯಾಪ್ತಿಯ ಅಂತ್ಯದಲ್ಲಿ ಬರುತ್ತಿದ್ದು, ಅರಸೀಕೆರೆ ವಿತರಣಾ ತೊಟ್ಟಿಯಿಂದ 49 ಕಿಮೀ ದೂರದಲ್ಲಿರುತ್ತದೆ. ಯೋಜನೆಯಲ್ಲಿ ಬಲ್ಲಾಳ ಸಮುದ್ರ ಕೆರೆಗೆ 32.93 ಎಂ.ಸಿ.ಎಫ್.ಟಿ.ನೀರನ್ನು 700 ಮಿಮೀ. ವ್ಯಾಸ ಪೈಪ್‌ನ ಮುಖಾಂತರ ಹರಿಸಿ 8 ಗ್ರಾಮಗಳಿಗೆ ಕುಡಿಯುವ ನೀರು ಒದಗಿಸಲು ಯೋಜಿಸಲಾಗಿದೆ. ಪ್ರಸ್ತುತ ಅರಸೀಕೆರೆ ವಿತರಣಾ ತೊಟ್ಟಿಯಿಂದ ಬಲ್ಲಾಳಸಮುದ್ರ ಕೆರೆಯವರೆಗೆ 49 ಕಿ.ಮೀ.

ಉದ್ದ ಪೈಪ್‌ನ್ನು ಅಳವಡಿಸುವ ಕೆಲಸ ಜನವರಿ 2013ರಲ್ಲಿ ಪೂರ್ಣಗೊಂಡಿರುತ್ತದೆ.

ಹೇಮಾವತಿ ಯೋಜನೆ ಅಣೆಕಟ್ಟೆಯಿಂದ ಪ್ರತಿ ಸಾಲಿನಲ್ಲಿ ಜುಲೈ/ಆಗಸ್ಟ್ ನಿಂದ ಡಿಸೆಂಬರ್ ವರೆಗೆ ನೀರನ್ನು ನಾಲೆಗಳಲ್ಲಿ ಹರಿಸಲಾಗುತ್ತದೆ. ಈ ಸಾಲಿನಲ್ಲಿ ಡಿಸೆಂಬರ್‌ನಿಂದ ಮುಂದಕ್ಕೆ ನಾಲೆಯಲ್ಲಿ ನೀರು ಹರಿಸುವುದನ್ನು ನಿಲ್ಲಿಸಿದ್ದು, ಪ್ರಸ್ತುತ ಹೇಮಾವತಿ ಅಣೆಕಟ್ಟಿನಲ್ಲ ನೀರಿನ ಸಂಗ್ರಹ ಅತಿ ಕಡಿಮೆ ಇರುತ್ತದೆ. ಈ ಕಾರಣ, ತುಮಕೂರು ಶಾಖಾ ನಾಲೆಯಲ್ಲಿ ನೀರನ್ನು ಹರಿಸಲು ಸಾಧ್ಯವಿಲ್ಲದೇ ಇರುವುದರಿಂದ, ಹೊನ್ನವಳ್ಳಿ ಏತ ನೀರಾವರಿ ಯೋಜನೆಯಿಂದ ಬಲ್ಲಾಳಸಮುದ್ರ ಕೆರೆಗೆ ನೀರನ್ನು ಹರಿಸಲು ಸಾಧ್ಯವಾಗುವುದಿಲ್ಲ. ಮುಂದಿನ ಸಾಲಿನಲ್ಲಿ ನಾಲೆಯಲ್ಲಿ ನೀರು ಹರಿಸಿದಾಗ ಈ ಕೆರೆಗೆ ನೀರನ್ನು ಹರಿಸಲು ಕ್ರಮ ವಹಿಸಲಾಗುವುದು.

ಶ್ರೀ ಗೂಳಿಹಟ್ಟಿ ಡಿ.ಶೇಖರ್ (ಹೊಸದುರ್ಗ):– ಮಾನ್ಯ ಅಧ್ಯಕ್ಷರೆ, ಹೊನ್ನವಳ್ಳಿ Lift Irrigation ನಿಂದ ನಮ್ಮ ತಾಲ್ಲೂಕಿಗೆ, ಹೊಸದುರ್ಗ ಟೌನ್‌ಗೆ ಕುಡಿಯುವುದಕ್ಕೆ ಮತ್ತು ಕೆರೆಗಳಿಗೆ ನೀರು ಕೊಡಿ ಎಂದು ಕೇಳಿದ್ದೆವು. ಈ ಉತ್ತರದಲ್ಲಿ ಖಡಾಖಂಡಿತವಾಗಿ ಆಗುವುದೇ ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ದಯಮಾಡಿ ಆಗುವುದಿಲ್ಲ ಎನ್ನುವ ಪದವನ್ನು ಸ್ವಲ್ಪ ಸಡಿಲಿಸಿ ಒಂದು ಕೆರೆಗಾದರೂ, ಇವತ್ತು 500 ರಿಂದ 600 ಫೀಟ್ ಹೋದರೂ ಕೂಡ ನೀರು ಬೀಳುತ್ತಿಲ್ಲ. ಹೊಸದುರ್ಗ ಟೌನ್‌ಗೆ ನೀರಿಲ್ಲ. ದಯಮಾಡಿ ತಿಪಟೂರಿನ ಕಣಕಟ್ಟೆ ಕೆರೆ ಹತ್ತಿರ ಏನು ನೀರು ಬಂದಿದೆ, ಹೇಗಾದರೂ ಮಾಡಿ ಆಗುವುದಿಲ್ಲ ಎನ್ನುವ ಪದ ಬೇಡ. ಏಕೆಂದರೆ, ಅಲ್ಲಿ ನಾನು independent MLA ಆಗಿದ್ದೇನೆ ಎನ್ನುವ ಕಾರಣವನ್ನಿಟ್ಟುಕೊಂಡು ಅಥವಾ ಯಾವ ದುರುದ್ದೇಶ ಇಟ್ಟುಕೊಂಡು ಹೇಳಿದ್ದಾರೋ ಗೊತ್ತಿಲ್ಲ. ದಯಮಾಡಿ ಒಂದರೆಡು ದಿನಗಳವರೆಗಾದರೂ ನಮಗೆ ಕುಡಿಯುವ ನೀರಿಗೆ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಮತ್ತೊಮ್ಮೆ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್.ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಜಲಸಂಪನ್ಮೂಲ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ಶ್ರೀ ಗೂಳಿಹಟ್ಟಿ ಶೇಖರ್‌ರವರು independent MLA ಎಂದು ಏನೂ

ಅನಾದರ ತೋರಿಸುತ್ತಿಲ್ಲ. ಅವರು ನಮ್ಮ ಜೊತೆಗೆ ಗೌರವಾನ್ವಿತ ಸಚಿವರಾಗಿದ್ದವರು. ಅವರ ಬಗ್ಗೆ ಸಂಪೂರ್ಣವಾದ ಗೌರವವಿದೆ.

ಶ್ರೀ ಟಿ.ಬಿ.ಜಯಚಂದ್ರ:– independent or dependent?

ಶ್ರೀ ಎಸ್.ಸುರೇಶ್ ಕುಮಾರ್:– It depends upon the interpretation. ಆದರೆ ವಾಸ್ತವಾಂಶ ಏನೆಂದರೆ, ಕೊನೆ ಪ್ಯಾರಾದ ಉತ್ತರದಲ್ಲಿ ಸ್ಪಷ್ಟಪಡಿಸಿದ್ದೇವೆ. ಹೇಮಾವತಿ ಯೋಜನೆ ಅಣೆಕಟ್ಟೆಯಿಂದ ಪ್ರತಿ ಸಾಲಿನಲ್ಲಿ ಜುಲೈ/ಆಗಸ್ಟ್‌ನಿಂದ ಡಿಸೆಂಬರ್‌ವರೆಗೆ ನೀರನ್ನು ನಾಲೆಗಳಲ್ಲಿ ಹರಿಸಲಾಗುತ್ತದೆ. ಈ ಸಾಲಿನಲ್ಲಿ ಡಿಸೆಂಬರ್‌ನಿಂದ ಮುಂದಕ್ಕೆ ನಾಲೆಯಲ್ಲಿ ನೀರು ಹರಿಸುವುದನ್ನು ನಿಲ್ಲಿಸಿದ್ದು, ಪ್ರಸ್ತುತ ಹೇಮಾವತಿ ಅಣೆಕಟ್ಟಿನಲ್ಲಿ ನೀರಿನ ಸಂಗ್ರಹ ಅತಿ ಕಡಿಮೆ ಇರುತ್ತದೆ. ಈ ಕಾರಣ, ತುಮಕೂರು ಶಾಖಾ ನಾಲೆಯಲ್ಲಿ ನೀರನ್ನು ಹರಿಸಲು ಸಾಧ್ಯವಿಲ್ಲದೇ ಇರುವುದರಿಂದ, ಹೊನ್ನವಳ್ಳಿ ಏತ ನೀರಾವರಿ ಯೋಜನೆಯಿಂದ ಬಲ್ಲಾಳಸಮುದ್ರ ಕೆರೆಗೆ ನೀರನ್ನು ಹರಿಸಲು ಸಾಧ್ಯವಾಗುವುದಿಲ್ಲ. ಈ ವರ್ಷದ ಪರಿಸ್ಥಿತಿ ಈ ರೀತಿಯಿದೆ. ಗೂಳಿಹಟ್ಟಿ ಶೇಖರ್‌ರವರಿಗೂ ಪರಿಸ್ಥಿತಿಯ ಅರಿವಿದೆ. ಆದರೆ ಅವರು ಹೇಳುತ್ತಿರುವುದೂ ಕೂಡ ಸತ್ಯವಿದೆ. ಹೊಸದುರ್ಗ ನಗರಕ್ಕೆ, ಪಟ್ಟಣಕ್ಕೆ ನೀರಿನ ಸಮಸ್ಯೆ ತುಂಬಾ ಇದೆ. ಇದನ್ನು ಗಮನದಲ್ಲಿಟ್ಟುಕೊಂಡು ಮುಂದೆ ಇನ್ನೂ ಏನಾದರೂ ಮಾಡಬಹುದೇ ಎಂದು ಪರಿಶೀಲಿಸುತ್ತೇವೆ.

ಅಧ್ಯಕ್ಷರು:– ಆಯಿತು. ವಿದ್ಯುತ್ ಸಂಪರ್ಕದ ಚರ್ಚೆ ಸೋಮವಾರ ಇದೆ. ಆಗ ಮಾತನಾಡಿ.

ಶ್ರೀ ಗೂಳಿಹಟ್ಟಿ ಡಿ.ಶೇಖರ್:– ಮಾನ್ಯ ಅಧ್ಯಕ್ಷರೆ, ಕರೆಂಟ್, ಕಳೆದ 15 ದಿವಸಗಳಿಂದ 2 ಗಂಟೆ, ಒಂದೂವರೆ ಗಂಟೆಯೂ ಕೊಡುತ್ತಿಲ್ಲ.

ಶ್ರೀ ಎಸ್.ಸುರೇಶ್ ಕುಮಾರ್:– ಸೋಮವಾರ ಅರ್ಧ ಗಂಟೆ ಚರ್ಚೆಯಲ್ಲಿ ಮಾಡನಾಡಿ.

ಅಧ್ಯಕ್ಷರು:– ಅರ್ಧ ಗಂಟೆ ಚರ್ಚೆ ಸೋಮವಾರವಿದೆ. ಆಗ ಮಾತನಾಡಿ. ಶ್ರೀ ಗೋಪಾಲ್ ಭಂಡಾರಿ.

6. ವಿಷಯ: ಕಾರ್ಕಳ ತಾಲ್ಲೂಕಿನ ಚಾರಾ ಗ್ರಾಮದ ಸರ್ವೆ ನಂ.105ನ್ನು ಅರಣ್ಯ ಇಲಾಖೆ ಅರಣ್ಯ ಎಂದು ಕಂದಾಯ ಇಲಾಖೆಗೆ ತಪ್ಪಾಗಿ ಪತ್ರ ಬರೆದಿರುವ ಬಗ್ಗೆ.